**DAC – 530**

# ತೃತೀಯ ಬಿ. ಎ. ಪದವಿ ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2008
## ಅಂಚೆ ಮತ್ತು ತೆರಪಿನ ಶಿಕ್ಷಣ
## ಬಸವ ತತ್ವ
## ಪತ್ರಿಕೆ 3 : ಕರಣ ಹಸಿಗೆ

ಅವಧಿ : 3 ಗಂಟೆಗಳು

ಅಂಕಗಳು : 70

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **(2×5=10)**

ಅ) ಅಂದು ಇಂದು ಮತ್ತೊಂದೆನ ಬೇಡ
ದಿನವಿಂದೇ ಶಿವಶರಣೆಂಬವಂಗೆ
ದಿನವಿಂದೇ ಹರಶರಣೆಂಬವಂಗೆ
ದಿನವಿಂದೇ ನಮ್ಮ ಕೂಡಲಸಂಗಮನ ಮರೆದೇ ನೆನೆವಂಗೆ.

ಆ) ಸತ್ಯದಲ್ಲಿ ನಡೆವುದು ಶೀಲ
ಸತ್ಯದಲ್ಲಿ ನುಡಿವುದು ಶೀಲ
ಸತ್ಯ ಸದಾಚಾರದಲ್ಲಿ ವರ್ತಿಸಿ
ನಿತ್ಯವನರಿವುದೇ ಶೀಲ ಕಾಣಿಭೋ
ಮಹಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ

ಇ) ವೀರಶೈವನಾದೊಡೆ ಪರಧನ ಪರಸತಿಯರ ಮುಟ್ಟದಿರಬೇಕು
ಎಂದೂ ಪರಹಿಂಸೆಯ ನೆಸಗದಿರಬೇಕು
ಒಡಲಳಿದಡೆಯೂ ಹಿಡಿದಾಚಾರವ ಬಿಡದಿರಬೇಕು
ಇಂತೀ ವೀರಾಚಾರವು ನೆಲೆಗೊಳ್ಳದೆ
ವೀರವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ವೀರಶೈವನೆಂತಪ್ಪನಯ್ಯ
ಕೂಡಲಸಂಗಮದೇವ

AUGUST SEPTEMBER EXAM 2008

2. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **(4×10=40)**

ಅ) ಮೂಢನಂಬಿಕೆ ಎಂದರೇನು ? ಮೂಢನಂಬಿಕೆಗಳನ್ನು ತೊಲಗಿಸಲು 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ಪ್ರಯತ್ನದ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ವಿವರಿಸಿ.

ಆ) ಹೆಣ್ಣೇ ಇರಲಿ ಗಂಡೇ ಇರಲಿ ಅವರಲ್ಲಿ ಇರುವ ಆತ್ಮ ಒಂದೇ ಎಂಬ ಶರಣರ ಧೋರಣೆಯನ್ನು ವಿವರಿಸಿ.

ಇ) ನಿಜ ಧರ್ಮದ ತಿರುಳು ಯಾವುದು ? ಶರಣರ ಚಿಂತನೆಯ ಹಿನ್ನೆಲೆಯಲ್ಲಿ ವಿವರಿಸಿ.

ಈ) ವಿವೇಕರಹಿತ ಓದು ನಿಷ್ಪ್ರಯೋಜಕ ಎಂಬುದನ್ನು ಶರಣರ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.

ಉ) "ಇಂದಿಂಗೆ ನಾಳಿಂಗೆ ಬೇಕೆಂದೊಡೆ, ನಿಮ್ಮಾಣೆ, ನಿಮ್ಮ ಪ್ರಥರಾಣೆ" – ಈ ನಿಲುವನ್ನು ವಿವರಿಸಿ.

3. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **(4×5=20)**

ಅ) ಶೂನ್ಯ ಪೀಠ

ಆ) ಅಷ್ಟಾಂಗಯೋಗ

ಇ) ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು

ಈ) ಕರಣ ಹಸಿಗೆ ಮತ್ತು ಲಿಂಗಾಂಗ ಸಾಮರಸ್ಯ

ಉ) ಇಹಲೋಕದ ತಾಪತ್ರಯಗಳು

AUGUST SEPTEMBER EXAM 2008

---